# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಪರೀಕ್ಷೆ – 2022–23

# ಪ್ರಥಮ ಭಾಷೆ ಕನ್ನಡ

# ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ




**ರವೀಶ್ ಕುಮಾರ್ ಬಿ.**

**ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)**

**ಮೈಸೂರು – 570033.**

**ಸಂಚಾರಿವಾಣಿ ಸಂಖ್ಯೆ : 9448958498**

# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಪರೀಕ್ಷೆ – 2022–23

## ಪ್ರಥಮ ಭಾಷೆ ಕನ್ನಡ

## ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

# ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 6 |
| 6 | ಪ್ರಶ್ನೆ ಪತ್ರಿಕೆ | 7 | 10 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 11 | 22 |

# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಪರೀಕ್ಷೆ – 2022–23
## ಪ್ರಥಮ ಭಾಷೆ ಕನ್ನಡ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 14 |
| 2 | ಗ್ರಹಿಕೆ | 36 | 36 | 19 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಕಿರು ಉತ್ತರ – 1 | 07 | 07 | 07 |
| 3 | ಕಿರು ಉತ್ತರ – 2 | 20 | 20 | 10 |
| 4 | ದೀರ್ಘ ಉತ್ತರ – 1 | 33 | 33 | 11 |
| 5 | ದೀರ್ಘ ಉತ್ತರ – 2 | 20 | 20 | 05 |
| 6 | ದೀರ್ಘ ಉತ್ತರ – 3 | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | |
| 2 | ಸಾಧಾರಣ | 50 | 50 | |
| 3 | ಕಠಿಣ | 20 | 20 | |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ರಾಮರಾಜ್ಯ | 03 | 02 |
| 2 | ಬೆಡಗಿನ ತಾಣ ಜಯಪುರ | 04 | 02 |
| 3 | ನಾನು ಕಂಡಂತೆ ಡಾ॥ ಬಿ. ಜಿ. ಎಲ್. ಸ್ವಾಮಿ | 03 | 02 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 04 | 01 |
| 5 | ಪ್ರಜಾನಿಷ್ಠೆ | 03 | 01 |
| 6 | ಜನಪದ ಕಲೆಗಳ ವೈಭವ | 03 | 01 |
| 7 | ಚೆನ್ನಭೈರಾದೇವಿ | 05 | 02 |
| 8 | ಹರಲೀಲೆ | 03 | 02 |
| | ಗದ್ಯ ಒಟ್ಟು | 28 | 13 |

2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಹೊಸಹಾಡು | 04 | 02 |
| 2 | ಪಾರಿವಾಳ | 04 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | 03 | 02 |
| 5 | ಹೇಮಂತ | 03 | 01 |
| 6 | ತತ್ವಪದಗಳು | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | 04 | 01 |
| 8 | ಕನ್ನಡ ನಾಡು ನುಡಿ | 05 | 02 |
| | ಪದ್ಯ ಒಟ್ಟು | 30 | 11 |

3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಗುಣಸಾಗರಿ ಪಂಢರೀಬಾಯಿ | 02 | 01 |
| 2 | ಹೊಳೆಬಾಗಿಲು | 02 | 01 |
| 3 | ನನ್ನಾಸೆ | 02 | 01 |
| 4 | ಉರಿದ ಬದುಕು | 02 | 01 |
| 5 | ಪುಟ್ಟಹಕ್ಕಿ | 01 | 01 |
| | ಪದ್ಯ ಒಟ್ಟು | 09 | 05 |

4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಅಪಠಿತ ಗದ್ಯ | 04 | 01 |

5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

# ಹಂತ : 5(ಎ) 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಪರೀಕ್ಷೆ – 2022–23 ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ರಾಮರಾಜ್ಯ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಬೆಡಗಿನ ತಾಣ ಜಯಪುರ | ** | 1(1) | 1(3) | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 3 | ನಾನು ಕಂಡಂತೆ ಡಾ॥ ಬಿ. ಜಿ. ಎಲ್. ಸ್ವಾಮಿ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 5 | ಪ್ರಜಾನಿಷ್ಠೆ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 6 | ಜನಪದ ಕಲೆಗಳ ವೈಭವ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 7 | ಚೆನ್ನಭೈರಾದೇವಿ | ** | ** | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 8 | ಹರಲೀಲೆ | ** | ** | ** | ** | ** | 1(1) | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| | **ಗದ್ಯ ಒಟ್ಟು** | * | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಹೊಸಹಾಡು | ** | ** | 1(3) | ** | ** | 1(1) | ** | ** | ** | ** | ** | ** | ** | ** | ** | 1(1) | ** | 1(3) | ** | ** | 04 | 02 |
| 2 | ಪಾರಿವಾಳ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 5 | ಹೇಮಂತ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | | 03 | 01 |
| 6 | ತತ್ತ್ವಪದಗಳು | ** | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | ** | 1(4) | | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | ** | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | | 04 | 01 |
| 8 | ಕನ್ನಡ ನಾಡು ನುಡಿ | ** | ** | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | | 05 | 02 |
| | **ಪದ್ಯ ಒಟ್ಟು** | * | **1(1)** | **1(3)** | **1(4)** | ** | 1(1) | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಗುಣಸಾಗರಿ ಪಂಢರೀಬಾಯಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 2 | ಹೊಳೆಬಾಗಿಲು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ನನ್ನಾಸೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ಉರಿದ ಬದುಕು | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 5 | ಪುಟ್ಟಹಕ್ಕಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | * | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

*****

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **06(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | **06(1)** | ** | ** | ** | **4(1)** | ** | ** | **3(3)** | ** | ** | 1(3) | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **06(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1 )** | **10(2)** | **11(3)** | **5(4)** | **2(5)** | **100** | **45** |
| | | **21 – 14** | | | | **36 – 19** | | | | | **39 – 11** | | | | **4 – 1** | **100 – 45** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಪರೀಕ್ಷೆ – 2022–23

## ವಿಷಯ : ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಒಟ್ಟು ಪ್ರಶ್ನೆಗಳ ಸಂಖ್ಯೆ : 45.** **ವಿಷಯ ಸಂಕೇತ : 01K**

**ಸಮಯ : 3 – 15 ಗಂಟೆಗಳು** **ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. 'ಪರ್ಯಾಲೋಚನೆ' ಪದದಲ್ಲಿ ಆಗಿರುವ ಸಂಧಿಯಿದು;
   ಎ) ಸವರ್ಣದೀರ್ಘ ಬಿ) ಗುಣ
   ಸಿ) ಯಣ್ ಡಿ) ಜಶ್ತ್ವ
2. ಇವುಗಳಲ್ಲಿ ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು;
   ಎ) ಹಣೆಗಣ್ಣ ಬಿ) ಮುಂದಲೆ
   ಸಿ) ತಲೆನೋವು ಡಿ) ದಿವ್ಯಪ್ರಕಾಶ
3. 'ಶರಣಂಗೆ' ಪದದಲ್ಲಿರುವ ವಿಭಕ್ತಿಯ ಹೆಸರು;
   ಎ) ತೃತೀಯಾ ಬಿ) ಚತುರ್ಥೀ
   ಸಿ) ಪಂಚಮೀ ಡಿ) ಸಪ್ತಮೀ
4. ಸಕರ್ಮಕ ಧಾತುವಿಗೆ ಉದಾಹರಣೆಯಿದು;
   ಎ) ಮಲಗು ಬಿ) ಬದುಕು
   ಸಿ) ಓದು ಡಿ) ಹೊಳೆ
5. ವಿದ್ಯಾರ್ಥಿಗಳು ಶಾಲೆಗೆ ಹೋದರು. – ವಾಕ್ಯವು ಈ ಕಾಲರೂಪಕ್ಕೆ ಉದಾಹರಣೆಯಾಗಿದೆ;
   ಎ) ಭೂತಕಾಲ ಬಿ) ಭವಿಷ್ಯತ್ಕಾಲ
   ಸಿ) ವರ್ತಮಾನಕಾಲ ಡಿ) ಸರ್ವಕಾಲ
6. 'ಓದಿಯಾನು' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   ಎ) ವಿಧ್ಯರ್ಥಕ ಬಿ) ಸಂಭಾವನಾರ್ಥಕ
   ಸಿ) ನಿಷೇಧಾರ್ಥಕ ಡಿ) ಪ್ರಶ್ನಾರ್ಥಕ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ನಡೆನುಡಿ : ಜೋಡುನುಡಿ : : ಉನ್ನತೋನ್ನತ : __
8. ಅಂಬುಜ : ತಾವರೆ : : ನೀಲಾಂಬುಜ : _____
9. ಬನ : ವನ : : ಬೆತ್ತ : ____________
10. ಹಿಂದು : ಮುಂದು : : ಹಿರಿದು : ___________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

11. ಜನರು ಅರಸನನ್ನು ಹೇಗೆ ತಿರಸ್ಕರಿಸಬಹುದು?
12. ಜಯಪುರದ ಪೂರ್ವದ ರಾಜಧಾನಿ ಯಾವುದು?
13. ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?
14. ಶಿವನು ಗಿರಿಜೆ ಎಲ್ಲಿ ಇರಬೇಕೆಂದು ತಿಳಿಸಿದನು?
15. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?
16. ಅಭಯರುಚಿ ಮತ್ತು ಅಭಯಮತಿಯರನ್ನು ಸೆರೆಹಿಡಿದುದು ಯಾವಾಗ?
17. ಮುಟ್ಟಹಕ್ಕಿಯು ಗೂಡನ್ನು ಹೇಗೆ ಕಟ್ಟುತ್ತದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. ರಾಜನು ಸೇವಕರ ವಿಷಯದಲ್ಲಿ ಹೇಗೆ ವರ್ತಿಸಬೇಕು?
19. ಸ್ವಾಮಿ ಅವರ ಸಂಶೋಧನಾಸಕ್ತಿ ಹೇಗಿತ್ತು?
20. ಸಮುದ್ರಯುದ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಏಕೆ ಕಷ್ಟಸಾಧ್ಯ?
21. ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ ಏನೆಂದು ಮಾತನಾಡಿಕೊಂಡರು?
22. ಜೀವಿಗಳನ್ನು ಬಲಿಕೊಡುವುದರಿಂದ ಆಗುವ ಪರಿಣಾಮವೇನು?
23. ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರಂಗ ಅವರು ಹೇಗೆ ಸಾಧಿಸುತ್ತಾರೆ?
24. ಪಂಢರೀಬಾಯಿ ಅವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?
25. ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಗಡಿಬಿಡಿ ಹೇಗಿರುತ್ತದೆ?
26. ‘ನನ್ನಾಸೆ’ ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?
27. ದುರ್ಗಪ್ಪನಿ ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿಮಾತುಗಳಾವುವು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ಶಿವರಾಮ ಕಾರಂತ
29. ಕಯ್ಯಾರ ಕಿಞ್ಞಣ್ಣ ರೈ

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಸಕ್ಕದಮಂ ಪೇಟ್ವೊಡೆ ನೆರೆ
    ಸಕ್ಕದಮಂ ಪೇಟ್ಗೆ ಶುದ್ಧ ಕನ್ನಡದೊಳ್ ತಂ ।

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.** **1*3=3**

31. ಸಾವಿತ್ರಿಯ ಮುಖಕಮಲ ಅರಳಿತು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

32. ತುಂಬಿದ ಕೊಡ ತುಳುಕುವುದಿಲ್ಲ.

    ಅಥವಾ

    ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. “ದುಷ್ಟ ನಿಗ್ರಹ; ಶಿಷ್ಟ ಪರಿಪಾಲನೆ.”
34. “ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ.”
35. “ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು.”
36. “ಕನ್ನಡದೊಳಗೊಂದು ಕಥೆಯ ಪೇಳುವೆನು”
37. “ಚೆಂಗುಡಿಯ ಸಿಂಗರದ ವರವರೂಥಗಳೆನಿಸಿ”
38. “ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ”

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*4=4**

39. ಮಾತಿನೊಳಗ ________________
    ________________________________
    ________________________________
    ____________________________ ಕೆಡಲಿಬೇಡ

    ಅಥವಾ

ಬೀಸು ಗೂಟವಾದೆ

________________________________

________________________________

________________________________

________________________________

ಸಿದ್ಧರಾಮೇಶಗೆ ನಂದಿ ಕೋಲಾದೆ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

40. ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕಡೆದಿಹ ಹೊತ್ತು ರಂಬೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು ।
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

ಅಥವಾ

ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವೇನು? ವಿವರಿಸಿ.

42. ಜೋಡಿ ಪಾರಿವಾರಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅಥವಾ

'ಪಾರಿವಾಳ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4[2+2]**

43. ಪ್ರಾಗ್ಜೋತಿಷಪುರದ ರಾಜನಾದ ಭಗದತ್ತನು ಸುಪ್ರತೀಕವೆಂಬ ಆನೆಯೊಂದಿಗೆ ಭೀಮನನ್ನು ಎದುರುಗೊಂಡನು. ಈ ಆನೆಯನ್ನು ಮಣಿಸಲು ಭೀಮನಿಂದಲೂ ಸಾಧ್ಯವಿಲ್ಲ. ಇದನ್ನು ಮಣಿಸುವುದು ಕೃಷ್ಣಾರ್ಜುನರಿಗೆ ಮಾತ್ರ ಗೊತ್ತು. ಇಂದ್ರನ ಸಖನಾದ ಭಗದತ್ತನು ಪುರುಷಶ್ರೇಷ್ಠನೆಂದೂ ಪ್ರಸಿದ್ಧನು. ಇಂದು ಆತನನ್ನು ಸೋಲಿಸಲೇಬೇಕೆಂದು ಪಣತೊಟ್ಟು ಕೃಷ್ಣಾರ್ಜುನರು ಮುಂದೆ ಹೋಗುವಷ್ಟರಲ್ಲಿ ತ್ರಿಗರ್ತರು ಅರ್ಜುನನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ, ಅವರನ್ನು ಸೋಲಿಸಿ, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣನ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು. ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ. ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ" ಎಂದನು. ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. "ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾದಾಗಲೂ ಅವರನ್ನು ಅದು ಕೊಲ್ಲದೇ ಬಿಡುತ್ತಿರಲಿಲ್ಲ. ಈಗ ನನ್ನ ಅಸ್ತ್ರವು ನನ್ನ ಬಳಿಗೆ ಬಂದು ನನ್ನನ್ನು ಸೇರಿದೆ.

**ಪ್ರಶ್ನೆಗಳು :**

43. ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?
43. ಬ) ಕೃಷ್ಣನು ಅರ್ಜುನನನ್ನು ನಿನ್ನಂತಹ ಧರ್ನುರ್ಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?

**XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಮೈಸೂರು ನಗರದ ಕನಕದಾಸನಗರ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಂಕಲ್ಪ' ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ಮದುವೆಗೆ ಹೋಗಲು 5 ದಿನಗಳ ರಜೆ ನೀಡುವಂತೆ ಕೋರಿ, ನಿಮ್ಮ ಮುಖ್ಯಶಿಕ್ಷಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರು ತಾಲೂಕು ಕೇರ್ಗಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ 'ಅವನಿ' ಎಂದು ಭಾವಿಸಿಕೊಂಡು, ಶಾಲಾ ಪ್ರವಾಸಕ್ಕೆ ಹೋಗಲು ಹಣ ನೀಡುವಂತೆ ಕೋರಿ, ಮಂಡ್ಯ ಜಿಲ್ಲೆಯ ಮದ್ದೂರಿನ ರಾಮಮಂದಿರದ ಬೀದಿಯಲ್ಲಿ ವಾಸವಾಗಿರುವ ಶ್ರೀಪರಮಶಿವಪ್ಪ ಎನ್ನುವ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. * ಸಾವಯವ ಕೃಷಿ
    * ರಾಷ್ಟ್ರೀಯ ಭಾವೈಕ್ಯ

# ಎಸ್. ಎಸ್. ಎಲ್. ಸಿ. ಪೂರ್ವಸಿದ್ಧತಾ ಪರೀಕ್ಷೆ – 2022–23

## ಪ್ರಶ್ನೆ ಪತ್ರಿಕೆ

(ಶಾಲಾ ಅಭ್ಯರ್ಥಿಗಳಿಗೆ)

## ವಿಷಯ : ಪ್ರಥಮ ಭಾಷೆ ಕನ್ನಡ

**ಒಟ್ಟು ಪ್ರಶ್ನೆಗಳ ಸಂಖ್ಯೆ : 45.** **ವಿಷಯ ಸಂಕೇತ : 01K**

**ಸಮಯ : 3 – 15 ಗಂಟೆಗಳು** **ಗರಿಷ್ಠ ಅಂಕಗಳು : 100**

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. 'ಪರ್ಯಾಲೋಚನೆ' ಪದದಲ್ಲಿ ಆಗಿರುವ ಸಂಧಿಯಿದು;
   ಎ) ಸವರ್ಣದೀರ್ಘ ಬಿ) ಗುಣ
   ಸಿ) ಯಣ್ ಡಿ) ಜಶ್ತ್ವ

   **ಉತ್ತರ : ಸಿ) ಯಣ್**

2. ಇವುಗಳಲ್ಲಿ ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು;
   ಎ) ಹಣೆಗಣ್ಣ ಬಿ) ಮುಂದಲೆ
   ಸಿ) ತಲೆನೋವು ಡಿ) ದಿವ್ಯಪ್ರಕಾಶ

   **ಉತ್ತರ : ಸಿ) ತಲೆನೋವು**

3. 'ಶರಣಂಗೆ' ಪದದಲ್ಲಿರುವ ವಿಭಕ್ತಿಯ ಹೆಸರು;
   ಎ) ತೃತೀಯಾ ಬಿ) ಚತುರ್ಥೀ
   ಸಿ) ಪಂಚಮೀ ಡಿ) ಸಪ್ತಮೀ

   **ಉತ್ತರ : ಬಿ) ಚತುರ್ಥೀ**

4. ಸಕರ್ಮಕ ಧಾತುವಿಗೆ ಉದಾಹರಣೆಯಿದು;
   ಎ) ಮಲಗು ಬಿ) ಬದುಕು
   ಸಿ) ಓದು ಡಿ) ಹೊಳೆ

   **ಉತ್ತರ : ಸಿ) ಓದು**

5. ವಿದ್ಯಾರ್ಥಿಗಳು ಶಾಲೆಗೆ ಹೋದರು. – ವಾಕ್ಯವು ಈ ಕಾಲರೂಪಕ್ಕೆ ಉದಾಹರಣೆಯಾಗಿದೆ;
   ಎ) ಭೂತಕಾಲ ಬಿ) ಭವಿಷ್ಯತ್ಕಾಲ
   ಸಿ) ವರ್ತಮಾನಕಾಲ ಡಿ) ಸರ್ವಕಾಲ

   **ಉತ್ತರ : ಎ) ಭೂತಕಾಲ**

6. 'ಓದಿಯಾನು' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   ಎ) ವಿಧ್ಯರ್ಥಕ ಬಿ) ಸಂಭಾವನಾರ್ಥಕ
   ಸಿ) ನಿಷೇಧಾರ್ಥಕ ಡಿ) ಪ್ರಶ್ನಾರ್ಥಕ

   **ಉತ್ತರ : ಬಿ) ಸಂಭಾವನಾರ್ಥಕ**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ನಡೆನುಡಿ : ಜೋಡುನುಡಿ : : ಉನ್ನತೋನ್ನತ : **ದ್ವಿರುಕ್ತಿ**
8. ಅಂಬುಜ : ತಾವರೆ : : ನೀಲಾಂಬುಜ : **ನೈದಿಲೆ**
9. ಬನ : ವನ : : ಬೆತ್ತ : **ವೇತ್ರ**
10. ಹಿಂದು : ಮುಂದು : : ಹಿರಿದು : **ಕಿರಿದು**

(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

**11. ಜನರು ಅರಸನನ್ನು ಹೇಗೆ ತಿರಸ್ಕರಿಸಬಹುದು?**
ಬಲಾತ್ಕಾರದಿಂದ ಕೆಲಸ ಮಾಡಿಸಿಕೊಂಡು ಶೋಷಿಸುವ ಯಜಮಾನರನ್ನು ದ್ವೇಷಿಸುವ ಆಳುಗಳಂತೆ ಜನರು ಅರಸನನ್ನು ತಿರಸ್ಕರಿಸಬಹುದು.

**12. ಜಯಪುರದ ಪೂರ್ವದ ರಾಜಧಾನಿ ಯಾವುದು?**
ಜಯಪುರದ ಪೂರ್ವದ ರಾಜಧಾನಿ **ಅಂಬೇರ.**

**13. ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?**
ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಪಿಟೀಲು.

**14. ಶಿವನು ಗಿರಿಜೆ ಎಲ್ಲಿ ಇರಬೇಕೆಂದು ತಿಳಿಸಿದನು?**
ಶಿವನು ಗಿರಿಜೆಗೆ **"ನಾನು ಯಾವ ಊರಿನೊಳಿರುವೆನೋ ಅಲ್ಲಿಯ ದೇವಾಲಯದಲ್ಲಿ ನೀನು ಇರುವುದು"** ಎಂದು ತಿಳಿಸಿದನು.

**15. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?**
ಕವಿಯು **ನವಭಾವ, ನವಜೀವ, ನವಶಕ್ತಿಯನ್ನು ತುಂಬಿಸುವ** ಹಾಡನ್ನು ಹಾಡಬೇಕೆಂದು ಬಯಸುವರು.

**16. ಅಭಯರುಚಿ ಮತ್ತು ಅಭಯಮತಿಯರನ್ನು ಸೆರೆಹಿಡಿದುದು ಯಾವಾಗ?**
ಅಭಯರುಚಿ ಮತ್ತು ಅಭಯಮತಿಯನ್ನು **ಭಿಕ್ಷೆಗೆ** ಬಂದಿದ್ದಾಗ ಸೆರೆ ಹಿಡಿದರು.

**17. ಪುಟ್ಟಹಕ್ಕಿಯು ಗೂಡನ್ನು ಹೇಗೆ ಕಟ್ಟುತ್ತದೆ?**
ಪುಟ್ಟಹಕ್ಕಿಯು ಗೂಡನ್ನು **ಕಡ್ಡಿಕಡ್ಡಿ ಕೂಡಿಸಿ** ಕಟ್ಟುತ್ತದೆ.

(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

**18. ರಾಜನು ಸೇವಕರ ವಿಷಯದಲ್ಲಿ ಹೇಗೆ ವರ್ತಿಸಬೇಕು?**
"ರಾಜನಾದವನು ಸೇವಕರಿಗೆ ಕೊಡಬೇಕಾದ ಸಾಮಗ್ರಿಯನ್ನೂ ವೇತನವನ್ನೂ ಸರಿಯಾದ ಕಾಲದಲ್ಲಿ ಕೊಟ್ಟುಬಿಡಬೇಕು. ಕೊಡದಿದ್ದರೆ ಸೇವಕರು ರಾಜನ ಮೇಲೆ ಕೋಪಿಸಿಕೊಳ್ಳುತ್ತಾರೆ; ದುರ್ಮಾರ್ಗಕ್ಕೂ ಇಳಿಯುತ್ತಾರೆ. ಅದು ಮುಂದೆ ದೊಡ್ಡ ಮಟ್ಟದ ಅನರ್ಥಕ್ಕೆ ಕಾರಣವಾಗುತ್ತದೆ. ಹೀಗೆ ರಾಜನಾದವನು ಸೇವಕರ ವಿಷಯದಲ್ಲಿ ವರ್ತಿಸಬೇಕು" ಎಂದು ರಾಮನು ಹೇಳುತ್ತಾನೆ.

**19. ಸ್ವಾಮಿ ಅವರ ಸಂಶೋಧನಾಸಕ್ತಿ ಹೇಗಿತ್ತು?**
ಸಸ್ಯಶಾಸ್ತ್ರ ವಿಷಯದ ಸಂಶೋಧಕರಾದ ಸ್ವಾಮಿ ಅವರಿಗೆ ಸಸ್ಯಗಳ ಬಗೆಗಿನ ಸಂಶೋಧನೆಯ ಆಸಕ್ತಿ ಬಹಳ ಹೆಚ್ಚಾಗಿತ್ತು. ಸಸ್ಯದ ಕಾಂಡ, ನರರಚನೆಗಳಲ್ಲಿರುವ ವಿನ್ಯಾಸಗಳನ್ನು ತಕ್ಷಣ ಗ್ರಹಿಸುವ ಕಲ್ಪನಾಶಕ್ತಿ ಅವರಿಗಿತ್ತು. ಪಿಟೀಲು ನುಡಿಸುವಾಗಲೂ ಸಹ ಅವರು ಹುಡುಕುತ್ತಿದ್ದುದು ಶಬ್ದಗಳ ರಚನಾವೈಖರಿಯನ್ನು, ಅಂಥ ರಚನೆಗಳ ಸಾಧ್ಯತೆಯನ್ನು ಚಿತ್ರಕಲೆಯಲ್ಲೂ ಅರಸುತ್ತಿದ್ದರು. ಸ್ವಾಮಿಯವರು ಚಿಕ್ಕಮಕ್ಕಳಿಗೆ ಸಹಜವೆನ್ನಿಸುವ ಕೌತುಕವನ್ನು ಕಣ್ಣುಗಳಲ್ಲಿ ಸೂಸುತ್ತಿದ್ದರು. ಸಸ್ಯ ಮತ್ತು ವನಗಳನ್ನು ಅವರೆಂದೂ ಒಣಸಂಶೋಧಕನಾಗಿ ನೋಡುತ್ತಿರಲಿಲ್ಲ. ಕಲೆಯ ರಸ, ಆನಂದ ಮತ್ತು ಕೌತುಕಗಳು ಅವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು. ಇತಿಹಾಸ, ಸಾಹಿತ್ಯ ಇತರ ಲಲಿತಕಲೆಗಳಲ್ಲೂ ಅವರ ಸಂಶೋಧಕ ಬುದ್ಧಿ ಕೆಲಸ ಮಾಡುತ್ತಲೇ ಇತ್ತು.

**20. ಸಮುದ್ರಯುದ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಏಕೆ ಕಷ್ಟಸಾಧ್ಯ?**
"ಪೋರ್ಚುಗೀಸರು ಸುಮಾರು ನೂರಾಮೂವತ್ತು ಹಡಗುಗಳನ್ನು ಸಜ್ಜುಗೊಳಿಸಿಕೊಂಡಿದ್ದಾರೆ. ವಿಶೇಷ ತರಬೇತಿಯನ್ನು ಪಡೆದ ನಾವಿಕ ಸೈನ್ಯವನ್ನು ಪೋರ್ಚುಗಲ್ಲಿನಿಂದ ತರಿಸಿಕೊಂಡಿದ್ದಾರೆ. ಆದ್ದರಿಂದ ಸಮುದ್ರ ಯುದ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಕಷ್ಟಸಾಧ್ಯ" ಎಂದು ಶಬಲೆಯು ರಾಣಿ ಚೆನ್ನಭೈರಾದೇವಿಗೆ ತಿಳಿಸುತ್ತಾಳೆ.

**21. ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ ಏನೆಂದು ಮಾತನಾಡಿಕೊಂಡರು?**
ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ "ಈ ವೃದ್ಧನನ್ನು ಹಿಡಿದು ಬಿಟ್ಟರೆ ತುಪ್ಪದ ಕೊಡದ ಮೇಲೆ ಅಲ್ಲದೆ ಬೇರೆಡೆಗೆ ಬೀಳನು. ಈ ವೃದ್ಧಬ್ರಾಹ್ಮಣನನ್ನು, ಮುಪ್ಪಿನ ಮರುಳನನ್ನು, ಗೌತಮನ ಗೋವನ್ನು,

ಬ್ರಹ್ಮೇತಿಕಾರನನ್ನು ಮದುವೆ ಮಂಟಪದೊಳಗೆ ಬಿಟ್ಟವರು ಯಾರು? ಅಪಶಕುನವಾಯಿತು, ಮದುವೆಯು ಹಸನಾಗದು" ಎಂದು ಮಾತನಾಡಿಕೊಂಡರು.

22. **ಜೀವಿಗಳನ್ನು ಬಲಿಕೊಡುವುದರಿಂದ ಆಗುವ ಪರಿಣಾಮವೇನು?**
"ಹಿಂಸೆಯು ಮಾನವನನ್ನು ದಾನವನನ್ನಾಗಿಸುತ್ತದೆ. ಹಿಂಸೆಯನ್ನು ಮಾಡುವುದಿರಲಿ, ಹಿಂಸೆಯನ್ನು ಸಂಕಲ್ಪಿಸುವುದೂ ಘೋರಪಾಪ. ಇದು ಜನ್ಮಜನ್ಮಾಂತರಕ್ಕೂ ಕಾಡದೇ ಬಿಡದು. ಅಹಿಂಸೆಯೇ ಪರಮಧರ್ಮ" ಎನ್ನುವುದು ನಿತ್ಯಸತ್ಯ. ಜೀವಿಗಳನ್ನು ಬಲಿ ಕೊಡುವುದರಿಂದ ಪಾಪ ಮಾಡಿದಂತಾಗಿ ನರಕಪ್ರಾಪ್ತಿಯಾಗುತ್ತದೆ. ಹಾಗೂ ಅನೇಕ ನಾನಾ ಜನ್ಮಾಂತರಗಳಲ್ಲಿ, ನಾನಾ ಪ್ರಾಣಿಗಳ ಜನ್ಮಗಳನ್ನು ಪಡೆದು, ನಿರಂತರವಾಗಿ ದುಃಖಗಳನ್ನು ಅನುಭವಿಸಬೇಕಾಗುತ್ತದೆ.

23. **ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರಂಗ ಅವರು ಹೇಗೆ ಸಾಧಿಸುತ್ತಾರೆ?**
ಮಹಲಿಂಗರಂಗನು "ಸುಲಿದ ಬಾಳೆಯ ಹಣ್ಣಿನಂತೆ; ಪಕ್ವವಾದ ಜಲ್ಲೆ ಕಬ್ಬಿನಂತೆ; ತಣ್ಣಗಾದ ಹಾಲಿನಂತೆ ಸುಲಭವಾಗಿರುವ; ಲಲಿತವಾಗಿರುವ ಕನ್ನಡ ಭಾಷೆಯನ್ನು ಕಲಿತು; ಅರಿತು ಅದರಿಂದಲೇ ಮೋಕ್ಷಸಾಧನೆಯನ್ನು ಮಾಡಿಕೊಳ್ಳಬಹುದು. ಆದ್ದರಿಂದ ಮೋಕ್ಷ ಸಾಧನೆಯನ್ನು ಮಾಡಲು ಸಂಸ್ಕೃತ ಭಾಷೆಯು ಅನಿವಾರ್ಯ ವಾದುದಲ್ಲ" ಎಂದು ಹೇಳುತ್ತಾನೆ.

24. **ಪಂಢರೀಬಾಯಿ ಅವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?**
ಚಿಕ್ಕಂದಿನಿಂದಲ್ಲೇ ಪಂಢರೀಬಾಯಿ ಅವರಿಗೆ ಸಂಗೀತದ ಅಭ್ಯಾಸವಾಗಿತ್ತು. ಅವರು ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಕಲಿತಿದ್ದರು. ಮನೆಯಲ್ಲಿದ್ದ ಸೃಜನಶೀಲ ವಾತಾವರಣ ಅವರು 'ಕಲಾವಿದೆ'ಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳಾಗಿವೆ.

25. **ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಗಡಿಬಿಡಿ ಹೇಗಿರುತ್ತದೆ?**
ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಮೊದಲ ಸಲ ಲಾಂಚು ಹತ್ತುವವರ ಸಂಭ್ರಮ, ಕುತೂಹಲಗಳು ಹೇಳತೀರದು. ಲಾಂಚು ಬಂದು ನಿಂತ ಕೂಡಲೇ ಮೊದಲು ಜನರೆಲ್ಲ ಓಡಿಹೋಗಿ ಹತ್ತುತ್ತಾರೆ. ಆಮೇಲೆ ವಾಹನಗಳೆಲ್ಲ ಒಂದೊಂದಾಗಿ ಬರುತ್ತವೆ. ಎಲ್ಲಾ ವಾಹನಗಳೂ ಹಿಡಿಸುವುದಿಲ್ಲ; ಉಳಿದ ವಾಹನಗಳು ಮುಂದಿನ ಟ್ರಿಪ್ಪಿನವರೆಗೂ ಕಾಯಬೇಕು. ಲಾಂಚಿಗೆ ಬಂದವನು ಬೈಕಿನಲ್ಲೇ ಬಂದಿದ್ದರೂ ಓಡಿ ಬಂದು ಬಸ್ಸು ಹತ್ತಿದವನಂತೆ ಏದುಸಿರು ಬಿಡುತ್ತಾನೆ.

26. **'ನನ್ನಾಸೆ' ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?**
ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ನೆರಳಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯ ಕೈಯ ಗ್ರಂಥ, ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ದೇಹವು ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಆಗಬೇಕು ಎಂಬುದು ಕವಯಿತ್ರಿ ಅವರ ಆಸೆಗಳಾಗಿವೆ.

27. **ದುರ್ಗಪ್ಪನಿ ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿಮಾತುಗಳಾವುವು?**
ದುರ್ಗಪ್ಪ ಶಂಕರಣ್ಣನಿಗೆ "ಕುಡಿ ತಮ್ಮಾ, ಜೀವ ಬದುಕ್ಲಿ ಮೊದ್ಲು, ಜೀವಕ್ಕ ಯಾವ್ ಕುಲಾನೂ ಇಲ್ಲ. ಗಾಳಿಗೆ ಕುಲಾ ಅದೇನು ತಮ್ಮಾ, ನೀರಿಗೆ ಕುಲಾ ಅದೇನು ತಮ್ಮಾ, ನೆಲಕ್ಕ ಕುಲಾ ಅದೇನು? ಅದು ನಾವು ಮಾಡಿಕೊಂಡದ್ದು, ಕುಡಿ" ಎಂದು ಕುಲದ ಬಗೆಗೆ ನೀತಿ ಮಾತುಗಳನ್ನು ಹೇಳಿದನು.

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ** | **1 ಅಂಕ** |
| **ಒಟ್ಟು** | **3 ಅಂಕಗಳು** |

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

28. **ಶಿವರಾಮ ಕಾರಂತ**
**'ಕಡಲತೀರದ ಭಾರ್ಗವ'** ಎಂದು ಪ್ರಸಿದ್ಧರಾದ **ಶ್ರೀ ಕೋಟ ಶಿವರಾಮ ಕಾರಂತ** ಅವರು ಕ್ರಿ. ಶ. **1902** ರಲ್ಲಿ ಉಡುಪಿ ಜಿಲ್ಲೆಯ **ಕೋಟ**ದಲ್ಲಿ ಜನಿಸಿದರು. ಇವರು <u>ಅಬುವಿನಿಂದ ಬರಾಮಕ್ಕೆ</u>, ಅಪೂರ್ವ ಪಶ್ಚಿಮ, ಅರಸಿಕರಲ್ಲ, ಪಾತಾಳಕ್ಕೆ ಪಯಣ ಮತ್ತು ಪ್ರವಾಸ ಕಥನಗಳು ಎನ್ನುವ ಪ್ರವಾಸ ಕಥನಗಳನ್ನೂ, ಮೂಕಜ್ಜಿಯ ಕನಸುಗಳು, ಚೋಮನದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ ಮೈ ಮನಗಳ ಸುಳಿಯಲ್ಲಿ ಎನ್ನುವ

ಮೊದಲಾದ ಕಾದಂಬರಿಗಳನ್ನೂ, ಹಸಿವು, ಹಾವು, ಕವಿ, ಕರ್ಮ ಎನ್ನುವ ಮೊದಲಾದ ಕಥಾ ಸಂಕಲನಗಳನ್ನೂ, ರಾಷ್ಟ್ರಗೀತ, ಸುಧಾಕರ ಮತ್ತು ಸೀಳ್ಗವನಗಳು ಎನ್ನುವ ಕವನ ಸಂಕಲನಗಳನ್ನೂ, ಯಕ್ಷಗಾನ ಬಯಲಾಟ ಎನ್ನುವ ಜಾನಪದ ಸಾಹಿತ್ಯ ಕೃತಿಯನ್ನೂ, 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎನ್ನುವ ಆತ್ಮ ಕಥನವನ್ನೂ ರಚಿಸಿದ್ದಾರೆ. ಇವರ 'ಮೂಕಜ್ಜಿಯ ಕನಸುಗಳು' ಕೃತಿಗೆ '**ಭಾರತೀಯ ಜ್ಞಾನಪೀಠ ಪ್ರಶಸ್ತಿ**'ಯನ್ನೂ, 'ಯಕ್ಷಗಾನ ಬಯಲಾಟ' ಕೃತಿಗೆ '**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**'ಯನ್ನೂ, 'ಮೈಮನಗಳ ಸುಳಿಯಲ್ಲಿ' ಕೃತಿಗೆ '**ಪಂಪ ಪ್ರಶಸ್ತಿ**'ಯನ್ನೂ ನೀಡಿ ಗೌರವಿಸಲಾಗಿದೆ.

**29. ಕಯ್ಯಾರ ಕಿಞ್ಞಣ್ಣ ರೈ**

**ಶ್ರೀ ಕಯ್ಯಾರ ಕಿಞ್ಞಣ್ಣ ರೈ** ಅವರು **ಕ್ರಿ. ಶ. 1915** ರಲ್ಲಿ ಕಾಸರಗೋಡು ಜಿಲ್ಲೆಯ **ಕಯ್ಯಾರ** ಗ್ರಾಮದಲ್ಲಿ ಜನಿಸಿದರು. ಇವರು '**ಶತಮಾನದ ಗಾನ**' ಎಂಬ ಕವನ ಸಂಕಲನವನ್ನು ಸಂಪಾದಿಸಿದ್ದಾರೆ. ಇವರು 'ಶ್ರೀಮುಖ, ಐಕ್ಯಗಾನ, ಪುನರ್ನವ ಚೇತನ ಮತ್ತು ಕೊರಗ, ಗಂಧವತಿ' ಎಂಬ ಕವನ ಸಂಕಲನಗಳನ್ನು, 'ವಿರಾಗಿಣಿ' ಎಂಬ ನಾಟಕವನ್ನು, 'ಅನ್ನದೇವರು ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನವನ್ನು, 'ರತ್ನಾಕರ, ಪರಶುರಾಮ, ಎ. ಬಿ. ಶೆಟ್ಟಿ' ಎಂಬ ಜೀವನ ಚರಿತ್ರೆಗಳನ್ನು, 'ದುಡಿತವೇ ನನ್ನ ದೇವರು' ಎಂಬ ಆತ್ಮಕಥೆಯನ್ನು ರಚಿಸಿದ್ದಾರೆ. ಇವರು 'ಸಾಹಿತ್ಯ ದೃಷ್ಟಿ' ವಿಮರ್ಶಾ ಕೃತಿ ಹಾಗೂ 'ಪಂಚಮಿ' ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನಾಡೋಜ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

30. ಸಕ್ಕದಮಂ ಪೇಟ್ಳೊಡೆ ನೆರೆ
ಸಕ್ಕದಮಂ ಪೇಟ್ಗೆ ಶುದ್ಧ ಕನ್ನಡದೊಳ್ ತಂ ।

| | | |
|---|---|---|
| 4 | 4 | 4 |
| — ∪∪ | — — | ∪ ∪ ∪∪ |
| ಸಕ್ಕದ | ಮಂ ಪೇ | ಟ್ಳೊಡೆ ನೆರೆ |

| | | | | |
|---|---|---|---|---|
| 4 | 4 | 4 | 4 | 4 |
| — ∪∪ | — — | ∪ — ∪ | — ∪∪ | — — |
| ಸಕ್ಕದ | ಮಂ ಪೇ | ಟ್ಗೆಶುದ್ಧ | ಕನ್ನಡ | ದೊಳ್ ತಂ |

ಈ ಮೇಲಿನ ಪದ್ಯವು ಮಾತ್ರಾಗಣದ '**ಕಂದ ಪದ್ಯ**'ದಲ್ಲಿ ರಚಿತವಾಗಿದೆ.

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1*3=3**

**31. ಸಾವಿತ್ರಿಯ ಮುಖಕಮಲ ಅರಳಿತು.**

**ಅಲಂಕಾರ** : ರೂಪಕಾಲಂಕಾರ.

**ಲಕ್ಷಣ** : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು '**ರೂಪಕಾಲಂಕಾರ**'

| | |
|---|---|
| **ಉಪಮೇಯ** | : ಸಾವಿತ್ರಿಯ ಮುಖ |
| **ಉಪಮಾನ** | : ಕಮಲ |
| **ಸಮನ್ವಯ** | : ಇಲ್ಲಿ ಉಪಮೇಯವಾದ ಸಾವಿತ್ರಿಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವುದೇ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರಕ್ಕೆ ಉದಾಹರಣೆಯಾಗಿದೆ. |

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

**32. ತುಂಬಿದ ಕೊಡ ತುಳುಕುವುದಿಲ್ಲ.**

"ಗಾದೆಗಳು ವೇದಗಳಿಗೆ ಸಮಾನ" ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **"ತುಂಬಿದ ಕೊಡ ತುಳುಕುವುದಿಲ್ಲ"** ಎನ್ನುವ ಗಾದೆಯೂ ಸಹ ಒಂದಾಗಿದೆ.

ಒಂದು ಕೊಡದ ತುಂಬ ನೀರನ್ನು ತುಂಬಿ ಹೊತ್ತೊಯ್ದರೆ ನೀರಿನ ಸ್ವಲ್ಪ ಭಾಗವೂ ಹೊರ ಚೆಲ್ಲುವುದಿಲ್ಲ; ಶಬ್ದವನ್ನು ಉಂಟುಮಾಡುವುದಿಲ್ಲ. ಅದೇ ಕೊಡದಲ್ಲಿ ಅರ್ಧದಷ್ಟು ಮಾತ್ರ ನೀರು ತುಂಬಿ, ಹೊತ್ತೊಯ್ದರೆ ಗುಳುಗುಳು ಶಬ್ದವನ್ನು ಮಾಡುತ್ತಾ, ನೀರು ಚೆಲ್ಲುತ್ತಾ, ನಮ್ಮನ್ನು ಒದ್ದೆ ಮಾಡುತ್ತದೆ. ಇದು ಕೊಡದಲ್ಲಿ ನೀರು ತುಂಬಾ ಇಲ್ಲ ಎನ್ನುವುದನ್ನು ಸಹ ಸೂಚಿಸುತ್ತದೆ. ಹಾಗೆಯೇ ನಿಜವಾದ ವಿದ್ಯಾವಂತರಾದವರು; ನೀತಿವಂತ ಪ್ರಾಜ್ಞರು ಹೆಚ್ಚು ಮಾತನಾಡುವುದಿಲ್ಲ; ಆಟಾಟೋಪ ತೋರುವುದಿಲ್ಲ; ಆದರೆ ಪ್ರಯೋಜನಕಾರಿಗಳಾಗಿರುತ್ತಾರೆ. "ಅಲ್ಪವಿದ್ಯಾ ಮಹಾಗರ್ವಿ" ಎನ್ನುವ ಗಾದೆಯೇ ಇದೆ. ಅಲ್ಪ ವಿದ್ಯಾವಂತರು ಹೆಚ್ಚು ಹಾಗೂ ಅನವಶ್ಯಕವಾಗಿ ಮಾತನಾಡಿ, ತಮ್ಮ ಟೊಳ್ಳುತನವನ್ನು ಪ್ರದರ್ಶಿಸುತ್ತಾರೆ. ಗೊನೆ ತುಂಬಿದ ಬಾಳೆಯ ಗಿಡದಂತೆ ಬಾಗಿ, ವಿನಯದಿಂದ ಇದ್ದು; ಅಗತ್ಯ ಸಮಯದಲ್ಲಿ ತಮ್ಮ ವಿದ್ಯೆಯನ್ನು, ಮಾತನ್ನು ಪ್ರದರ್ಶಿಸಬೇಕು ಎಂಬುದೇ ಈ ಗಾದೆಯ ಒಳಾರ್ಥವಾಗಿದೆ.

**ಅಥವಾ**

**ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ**

"ಗಾದೆಗಳು ವೇದಗಳಿಗೆ ಸಮಾನ" ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **"ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ"** ಎಂಬ ಗಾದೆಯೂ ಸಹ ಒಂದಾಗಿದೆ.

ಕಗ್ಗತ್ತಲೆಯ ರಾತ್ರಿಯಲ್ಲಿ ಕಾಣದೆ ಬಾವಿಗೆ ಬೀಳುವುದು ಸಹಜವೇ. ಆದರೆ ರಾತ್ರಿಯ ವೇಳೆಯಲ್ಲಿ ನೋಡಿ ಬಂದ ಬಾವಿಗೆ ಹಗಲಿನಲ್ಲಿ ಬೀಳುವುದು ಅಸಹಜವಲ್ಲವೇ? ನಾವು ಕೆಟ್ಟ ಹಾದಿಯನ್ನು ಹಿಡಿದಿದ್ದೇವೆ, ತಪ್ಪು ಮಾಡುತ್ತಿದ್ದೇವೆ ಎಂದು ತಿಳಿದು ಸಹ ಅನೇಕ ಜನ ಸರಿದಾರಿಗೆ ಹೋಗದೆ ಮತ್ತೆ ಮತ್ತೆ ತಪ್ಪನ್ನೇ ಮಾಡುತ್ತಾರೆ. ಕುಡಿತದ ಅಭ್ಯಾಸವಿರುವವರು ಕುಡಿದಾಗ ಮಾಡಬಾರದ ಕೆಲಸ ಮಾಡುತ್ತಾರೆ. ನಿಶೆ ಇಳಿದ ಮೇಲೆ ಪಶ್ಚಾತ್ತಾಪ ಪಡುತ್ತಾರೆ. ಇನ್ನು ಕುಡಿಯುವುದಿಲ್ಲವೆಂದು ಸಂಕಲ್ಪ ಮಾಡುತ್ತಾರೆ. ಆದರೆ ಕುಡಿಯುವ ಸಮಯ ಬಂದೊಡನೆ ಅವರ ನಡೆ ಮದ್ಯದ ಅಂಗಡಿಯಕಡೆ ಇರುತ್ತದೆ ಎಚ್ಚೆತ್ತು ನಡೆಯಬೇಕು. ತಿಳಿದು ಅಪಾಯಕ್ಕೆ ಒಳಗಾಗಬಾರದು ಎಂಬುದೇ ಈ ಗಾದೆಯ ಅರ್ಥವಾಗಿದೆ.

| | |
|---|---|
| **ಆಯ್ಕೆ : ಕರ್ತೃ – ಆಕರ – ಪಾತ್ರ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

**33.** **"ದುಷ್ಟ ನಿಗ್ರಹ; ಶಿಷ್ಟ ಪರಿಪಾಲನೆ."**

**ಆಯ್ಕೆ :–** ಈ ವಾಕ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ **'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ'** ಅವರು ಪ್ರಕಟಿಸಿರುವ **'ಜಾನಪದ'** ವಿಷಯ ವಿಶ್ವಕೋಶದಿಂದ ಆಯ್ದು, ಪಠ್ಯಪುಸ್ತಕ ರಚನಾ ಸಮಿತಿ ಅವರು ಸಂಗ್ರಹಿಸಿರುವ **'ಜನಪದ ಕಲೆಗಳ ವೈಭವ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಕರ್ನಾಟಕದ ಪ್ರಸಿದ್ಧ ಜನಪದ ಕಲೆಯಾದ ಯಕ್ಷಗಾನ ನೀಡುವ ಸಂದೇಶವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಲೇಖಕರು "ಯಕ್ಷಗಾನ ಜನರಲ್ಲಿ ಧಾರ್ಮಿಕ ಪ್ರಜ್ಞೆ ಹಾಗೂ ನೀತಿ ಪ್ರಜ್ಞೆಯನ್ನು ಬೆಳೆಸಲು ಸಹಕಾರಿಯಾಗಿದೆ" ಎನ್ನುವುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**34.** **"ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ."**

**ಆಯ್ಕೆ : –** ಈ ವಾಕ್ಯವನ್ನು **ಸಾ. ಶಿ. ಮರುಳಯ್ಯ** ಅವರು ರಚಿಸಿರುವ **"ನಾಟ್ಯ ಮಯೂರಿ"** ಕೃತಿಯಿಂದ ಆಯ್ದ **'ಪ್ರಜಾನಿಷ್ಠೆ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ : –** ಹೊಯ್ಸಳರು ಚೋಳರನ್ನು ಯುದ್ಧದಲ್ಲಿ ಸೋಲಿಸಿ, ತಲಕಾಡನ್ನು ವಶಪಡಿಸಿಕೊಂಡಾಗ ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದ ಸಂದರ್ಭದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ : –** ಈ ಮಾತಿನಲ್ಲಿ ವಿಷ್ಣುವರ್ಧನನ ಧರ್ಮಪರತೆ ಹಾಗೂ ಮಾನವೀಯ ಗುಣಗಳು ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**35.** **"ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು."**

**ಆಯ್ಕೆ :** ಈ ವಾಕ್ಯವನ್ನು ಡಾ. ಗಜಾನನ ಶರ್ಮ ಅವರು ರಚಿಸಿರುವ ಐತಿಹಾಸಿಕ ನಾಟಕ **'ಚೆನ್ನಭೈರಾದೇವಿ'** ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಚೆನ್ನಭೈರಾದೇವಿಯು "ಹೊನ್ನಾವರದ ಕೋಟೆಯನ್ನು ಸಂಪೂರ್ಣ ತೆರವುಗೊಳಿಸಿ, ಒಳಗಿನಿಂದ ಬಾಗಿಲು ಭದ್ರಗೊಳಿಸಿ, ಹೊರಗೆ ಶಸ್ತ್ರ ಸಜ್ಜಿತ ಯೋಧರು ಪೋರ್ಚುಗೀಸರೊಡನೆ ಹೋರಾಡುತ್ತಾ, ನಾಲ್ಕೈದು ದಿನ ಅವರನ್ನು ತಡೆದು, ನಂತರ ಹೇಗಾದರೂ ಮಾಡಿ, ಮೆಲ್ಲಗೆ ಅಲ್ಲಿಂದ ಪಲಾಯನ ಮಾಡಿ" ಎಂದಾಗ ಭೈರವ ನಾಯಕನು "ನಮ್ಮ ಯೋಧರು ಶತ್ರುಗಳಿಗೆ ಬೆನ್ನು ತೋರಿಸಿಬೇಕೇ? ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ಚೆನ್ನಭೈರಾದೇವಿಯು ಈ ಮಾತನ್ನು ಹೇಳುತ್ತಾಳೆ'

**ಸ್ವಾರಸ್ಯ :** "ಯುದ್ಧ ತಂತ್ರವನ್ನು ಬದಲಿಸಿ, ಶತ್ರುಗಳನ್ನು ದಿಕ್ಕು ತಪ್ಪಿಸಿ, ಯುದ್ಧವನ್ನು ಗೆಲ್ಲಬೇಕು" ಎನ್ನುವ ಚೆನ್ನಭೈರಾದೇವಿಯ ಚಿಂತನೆಯು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**36.** **"ಕನ್ನಡದೊಳಗೊಂದು ಕಥೆಯ ಪೇಳುವೆನು"**

**ಆಯ್ಕೆ :– ಈ** ವಾಕ್ಯವನ್ನು **ತ. ಸು. ಶಾಮರಾಯ ಅವರು** ಸಂಪಾದಿಸಿರುವ **ಶ್ರೀ ರತ್ನಾಕರವರ್ಣಿ** ಅವರು ರಚಿಸಿರುವ **'ಭರತೇಶ ವೈಭವ'** ಕೃತಿಯಿಂದ ಆಯ್ದ **'ಸಿರಿಯನಿನ್ನೇನ ಬಣ್ಣಿಪೆನು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** "ಗುರುವೆ ಧ್ಯಾನ ಬೇಸರವಾದಾಗ ನಿನ್ನನ್ನು ಆಧಾರವಾಗಿಟ್ಟುಕೊಂಡು ಕನ್ನಡ ಭಾಷೆಯಲ್ಲಿ ಒಂದು ಕಥೆಯನ್ನು ಹೇಳುತ್ತೇನೆ" ಎಂದು ಕವಿಯು ವಿಜ್ಞಾಪನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಗುರುವಿನ ಬಗ್ಗೆ ಇಟ್ಟಿರುವ ಗೌರವ ಭಾವನೆಯನ್ನು ಹಾಗೂ ಕನ್ನಡ ಪ್ರೇಮವನ್ನು ಕವಿಯು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**37.** **"ಚೆಂಗುಡಿಯ ಸಿಂಗರದ ವರವರೂಥಗಳೆನಿಸಿ"**

**ಆಯ್ಕೆ :** ಈ ವಾಕ್ಯವನ್ನು ಡಾ. ಎಸ್.ವಿ. ಪರಮೇಶ್ವರ ಭಟ್ಟ ಅವರು ರಚಿಸಿರುವ 'ಗಗನಚುಕ್ಕಿ' ಕವನ ಸಂಕಲನದಿಂದ ಆಯ್ದ 'ಹೇಮಂತ' ಎನ್ನುವ ಕವಿತೆಯಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಹೇಮಂತ ಋತುವಿನಲ್ಲಿ ಪ್ರಕೃತಿಯಲ್ಲಿ ಕಂಡುಬರುವ ದೃಶ್ಯಗಳನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ಹೇಮಂತ ಋತುವಿಗೆ ಮೊದಲು ಚಿಗುರಾದ ಎಲೆಗಳಿಂದ ತುಂಬಿ ಮರಗಿಡಗಳು ಶೋಭಿಸುವುದನ್ನು ಕೆಂಪಾದ ಪತಾಕೆಗಳಿಂದ ಅಲಂಕರಿಸಿದ ತೇರಿಗೆ ಹೋಲಿಸಿ ವರ್ಣಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**38.** **"ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ"**

**ಆಯ್ಕೆ :** ಈ ವಾಕ್ಯವನ್ನು ಶ್ರೀ ಬಿ. ಎಂ. ಶ್ರೀಕಂಠಯ್ಯ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ **'ಕನ್ನಡ ನಾಡು ನುಡಿ'** ಪದ್ಯಭಾಗಕ್ಕಾಗಿ ಆಯ್ದು, **ಕವಿ ನೇಮಿಚಂದ್ರ** ರಚಿಸಿರುವ **'ಲೀಲಾವತೀ ಪ್ರಬಂಧಂ'** ಕೃತಿಯಿಂದ ಆರಿಸಲಾಗಿದೆ.

**ಸಂದರ್ಭ :** ನೇಮಿಚಂದ್ರನು **"**ರಾಮಾಯಣದಲ್ಲಿ ವಾನರಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲಿ ಕಟ್ಟದಿರಲಿ. ಆದರೆ ಕವಿಗಳು ತಮ್ಮ ಕೃತಿಗಳಲ್ಲಿ ವಾನರ ಸೈನ್ಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರು**"** ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ನೇಮಿಚಂದ್ರನು ಕವಿಗಳ ಶ್ರೇಷ್ಠತೆಯನ್ನು ಹಾಗೂ ಸಾಮರ್ಥ್ಯವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾನೆ.

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*4=4**

39. ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕ ಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ

**ಅಥವಾ**

ಬೀಸುವ ಗೂಟವಾದೆ
ಕೇರುವ ಮೊರವಾದೆ
ಮುದುಕರಿಗೆ ಊರುವ ಬೆತ್ತವಾದೆ
ಆಡುವ ಕೋಲಾದೆ
ಹೂಡಲು ಚಕ್ಕಡಿಯಾದೆ
ಸಿದ್ಧರಾಮೇಶಗೆ ನಂದಿ ಕೋಲಾದೆ

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **3. ಅಂಕಗಳು** |
| **ಒಟ್ಟು** | **4. ಅಂಕಗಳು** |

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.**
**1*4=4**

**40.** **ಬಡತನದ ಹೊತ್ತಾನೆ ದೊರಕಿ ಫಲವೇನು ನೀ**
**ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ**
**ಯಡಸಿ ಕಡೆದಿಹ ಹೊತ್ತು ರಂಬೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು ।**
**ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು**
**ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿ**
**ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು ॥**

ಈ ಪದ್ಯಭಾಗವನ್ನು ಶ್ರೀ ಟಿ. ಎಸ್. ವೆಂಕಣ್ಣಯ್ಯ ಅವರು ಸಂಪಾದಿಸಿರುವ **ಕವಿ ರಾಘವಾಂಕನು** ರಚಿಸಿರುವ **'ಹರಿಶ್ಚಂದ್ರ ಕಾವ್ಯ'** ಕೃತಿಯಿಂದ ಆಯ್ದ **'ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಹರಿಶ್ಚಂದ್ರನು ತನ್ನ ಮನಸ್ಸನ್ನು ಗಾನನೃತ್ಯಗಳಿಂದ ಸಂತೋಷಪಡಿಸಿದ ಗಾನರಾಣಿಯರಿಗೆ ಚಿನ್ನದ ಆಭರಣಗಳನ್ನು ಬಹುಮಾನವಾಗಿ ಕೊಟ್ಟ ಸಂದರ್ಭದಲ್ಲಿ ಗಾನರಾಣಿಯರು ಹರಿಶ್ಚಂದ್ರನಿಗೆ ಈ ಮಾತನ್ನು ಹೇಳುತ್ತಾರೆ.

"ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆಯ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗಬಂದು ಬಿದ್ದಿರುವಾಗ ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದ ದೊರೆತನವು ದೊರಕಿ ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು

ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು?" ಎಂದು ಹೇಳುತ್ತಾ ಗಾನರಾಣಿಯರು ಮತ್ತೆ ಹೀಗೆ ಹೇಳಿದರು.

"ನಮಗೆ ಯಾವುದು ಅಗತ್ಯವೋ ಅದನ್ನು ಬಹುಮಾನವಾಗಿ ಕೊಡಬೇಕೋ ಹೊರತು ಮತ್ತ್ಯಾವುದನ್ನೋ ಕೊಡುವುದರಿಂದ ಏನು ಪ್ರಯೋಜನ" ಎಂದು ಈ ಮಾತಿನ ಮೂಲಕ ಗಾನರಾಣಿಯರು ಸ್ವಾರಸ್ಯಪೂರ್ಣವಾಗಿ ಹೇಳುತ್ತಾರೆ.

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8**

**41. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.**

ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್‌ಸ್ಪೆಕ್ಟರಾಗಿ ಮದ್ರಾಸಿನಲ್ಲಿ ಮೊದಲ ಸೇವೆಯನ್ನು ಆರಂಭಿಸಿದರು. ನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು, ಸಯ್ಯದ್‌ಪೇಟೆಯ ಟೀಚರ್ಸ್ ಟ್ರೈನಿಂಗ್ ಕಾಲೇಜು, ಆಂಧ್ರದ ಅನಂತಪುರ ಹಾಗೂ ರಾಜಮಂಡ್ರಿಯ ಸರ್ಕಾರಿ ಕಲಾ ಕಾಲೇಜುಗಳಲ್ಲಿ ಸೇವೆಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೋಲ್ಕತ್ತಾದಲ್ಲಿ ಪ್ರಾಧ್ಯಾಪಕರಾಗಿ ಸ್ಮರಣೀಯ ಸೇವೆಸಲ್ಲಿಸಿದರು. ಇದಲ್ಲದೆ ಆಂಧ್ರ, ದೆಹಲಿ, ಬನಾರಸ್ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಯಾಗಿ ಸೇವೆಸಲ್ಲಿಸಿ, ಅವುಗಳ ಪುರೋಭಿವೃದ್ಧಿಗೆ ಶ್ರಮಿಸಿದರು. ಆಕ್ಸಫರ್ಡ್ ವಿಶ್ವವಿದ್ಯಾನಿಲಯದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಅವರು ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು.

**ಅಥವಾ**

**ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವೇನು? ವಿವರಿಸಿ.**

ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ತ್ವಶಾಸ್ತ್ರ ಮತ್ತು ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯುರೋಪಿಯನ್ ತತ್ತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ತ್ವಿಕ ದೃಷ್ಟಿಕೋನ ಪ್ರಭಾವಿತವಾಗಿತ್ತು. ಸ್ವಾಮಿವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವಾಗಿದ್ದು, ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು, ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯವುಳ್ಳದ್ದಾಗಿದೆ. ಹಿಂದೂ ಧರ್ಮವಾಗಲಿ, ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ, ಜೀವನದ ನಾಡಿ ಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ" ಎಂದು ಸರಳವಾಗಿ ಹೇಳಿದರು.

**42. ಜೋಡಿ ಪಾರಿವಾರಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದಟ್ಟಕಾಡಿನಲ್ಲಿದ್ದ ಒಂದು ಹೆಮ್ಮರದ ಪೊಟರೆಯಲ್ಲಿ ಮುದ್ದು ಬಿಳಿ ಪಾರಿವಾಳಗಳ ಜೋಡಿ ಪ್ರೀತಿಯಿಂದ ಜೀವನ ನಡೆಸುತ್ತಿದ್ದವು. ಅವು ಒಂದನ್ನೊಂದು ಅಗಲಿರದೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು. ಅವುಗಳ ಸಂಸಾರದಲ್ಲಿ ಸಂತೋಷವು ಮನೆಮಾಡಿತ್ತು. ಹೀಗಿರಲು ಆ ಜೋಡಿಗಳು ಮೊಟ್ಟೆಯನಿಟ್ಟು ಮರಿಮಾಡಿದವು. ಆ ಮುದ್ದು ಮರಿಗಳ ಮಧುರ ಸದ್ದುಕೇಳಿ, ಅವುಗಳ ಸಂತೋಷ ಇಮ್ಮಡಿಯಾಯಿತು. ಒಂದು ದಿನ ಬೇಡನೊಬ್ಬನು ಬಂದು ಪಾರಿವಾಳಗಳನ್ನು ಹಿಡಿಯಲು ಬಲೆಯನ್ನು ಹರಡಿದನು. ಪುಟ್ಟ ಮರಿಗಳು ಬೇಡನು ಹರಡಿದ ಬಲೆಗೆ ಸಿಲುಕಿದವು ಹೊರಗೆ ಬರಲು ಚೀತ್ಕರಿಸತೊಡಗಿದವು. ಜೋಡಿ ಪಾರಿವಾಳಗಳು ಮನಸ್ಸಿನಲ್ಲಿ ಮೋಹವನ್ನು ತುಂಬಿಕೊಂಡು ಬೇಡನ ಬೀಸಿದ ಬಲೆಗೆ ಬಿದ್ದು ತಮ್ಮ ಪ್ರಾಣ ಕಳೆದುಕೊಂಡವು. ಇಲ್ಲಿ ಆ ಜೋಡಿ ಪಾರಿವಾಳಗಳು ದುಡುಕಿ ನಿರ್ಧಾರಕ್ಕೆ ಬಂದಿದ್ದು ತಪ್ಪಾಯಿತು. ಆ ಜೋಡಿ ಪಾರಿವಾಳಗಳು ಯೋಚಿಸಿ ನಿರ್ಧಾರಕ್ಕೆ ಬರಬೇಕಿತ್ತು ಅಥವಾ ಆ ಜೋಡಿ ಪಾರಿವಾಳಗಳು ಕುರುಡು ವಾತ್ಸಲ್ಯಕ್ಕೆ ಒಳಗಾಗಬಾರದಿತ್ತು. ಆ ಮರಿಗಳನ್ನು ಬಿಡಿಸಲು ಪ್ರಯತ್ನಿಸಬೇಕಿತ್ತು. ವ್ಯಾಮೋಹಕ್ಕೆ ಒಳಗಾಗದೆ ಅವಸರದ ತೀರ್ಮಾನಕ್ಕೆ ಬರಬಾರದಿತ್ತು. ತಾಳ್ಮೆಯಿಂದ

ಇಡೀ ಪರಿಸ್ಥಿತಿಯನ್ನು ಎದುರಿಸಬೇಕಿತ್ತು. ಮುಂದೆ ಬರಲಿರುವ ಸುಂದರ ಭವಿಷ್ಯವನ್ನು ಯೋಚಿಸಿಕೊಂಡು ಬಲೆಗೆ ಬೀಳದೆ ಇರಬಹುದಿತ್ತು.

**ಅಥವಾ**

**'ಪಾರಿವಾಳ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ದಟ್ಟಕಾಡಿನಲ್ಲಿದ್ದ ಒಂದು ಹೆಮ್ಮರದ ಪೊಟರೆಯಲ್ಲಿ ಮುದ್ದು ಬಿಳಿ ಪಾರಿವಾಳಗಳ ಜೋಡಿ ಪ್ರೀತಿಯಿಂದ ಜೀವನ ನಡೆಸುತ್ತಿದ್ದವು. ಅವು ಒಂದನ್ನೊಂದು ಅಗಲಿರದೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು. ಅವುಗಳ ಸಂಸಾರದಲ್ಲಿ ಸಂತೋಷವು ಮನೆಮಾಡಿತ್ತು. ಹೀಗಿರಲು ಆ ಜೋಡಿಗಳು ಮೊಟ್ಟೆಯನಿಟ್ಟು ಮರಿಮಾಡಿದವು. ಆ ಮುದ್ದು ಮರಿಗಳ ಮಧುರ ಸದ್ದುಕೇಳಿ ಅವುಗಳ ಸಂತೋಷ ಇಮ್ಮಡಿಯಾಯಿತು. ಒಂದು ದಿನ ಬೇಡನೊಬ್ಬನು ಬಂದು ಪಾರಿವಾಳಗಳನ್ನು ಹಿಡಿಯಲು ಬಲೆಯನ್ನು ಹರಡಿದನು. ಪುಟ್ಟ ಮರಿಗಳು ಬೇಡನು ಹರಡಿದ ಬಲೆಗೆ ಸಿಲುಕಿದವು. ಹೊರಗೆ ಬರಲು ಚೀತ್ಕರಿಸತೊಡಗಿದವು. ಮರಿ ಪಾರಿವಾಳಗಳ ಪಾಡು ಕಂಡು ತಾಯಿ ಬಲೆಗೆ ಧುಮುಕಿತು. ಹೆಂಡತಿಯನ್ನು ಬಿಟ್ಟಿರಲಾರದೆ ಗಂಡು ಹಕ್ಕಿ ದುಃಖದಿಂದ ತಾನೇ ಬಂದು ಬಲೆಗೆ ಸಿಲುಕಿತು. ಈ ರೀತಿ ಕುರುಡು ವಾತ್ಸಲ್ಯದಿಂದ ವಿವೇಕ ಕಳೆದುಕೊಂಡು ಇಡೀ ಸಂಸಾರವೇ ಬಲೆಗೆ ಸಿಲುಕಿದವು. ಬಲೆಗೆ ಸಿಲುಕಿದ ಆ ಪಾರಿವಾಳಗಳನ್ನು ಹಸಿದ ಬೇಡನು ಹೊತ್ತುಕೊಂಡು ನಡೆದನು. ಬುದ್ಧಿಯನ್ನು ಮೋಹವು ಮುಸುಕಿದರೆ ಸರ್ವನಾಶವಾಗುತ್ತದೆ. ಆದುದರಿಂದ ವ್ಯಾಮೋಹವನ್ನು ತೊರೆದು ಬಾಳ್ವೆ ನಡೆಸಬೇಕು

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4[2+2]**

**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

**43.** **ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?**

ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. "ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು.

**ಬ) ಕೃಷ್ಣನು ಅರ್ಜುನನನ್ನು ನಿನ್ನಂತಹ ಧರ್ನುಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?**

ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ, ಅವರನ್ನು ಸೋಲಿಸಿ, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣನ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು. ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ. ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ" ಎಂದನು.

| | |
|---|---|
| **ಇಂದ, ಗೆ, ಸಂಬೋಧನೆ, ವಿಷಯ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ, ಸ್ಥಳ, ದಿನಾಂಕ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **5 ಅಂಕಗಳು** |

**XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*5=5**

**44.** **ನಿಮ್ಮನ್ನು ಮೈಸೂರು ನಗರದ ಕನಕದಾಸನಗರ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಂಕಲ್ಪ' ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ಮದುವೆಗೆ ಹೋಗಲು 5 ದಿನಗಳ ರಜೆ ನೀಡುವಂತೆ ಕೋರಿ, ನಿಮ್ಮ ಮುಖ್ಯಶಿಕ್ಷಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.**

**ಇಂದ**

ಸಂಕಲ್ಪ
9 ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಕನಕದಾಸ ನಗರ
ಮೈಸೂರು

ದಿನಾಂಕ : 29–01–2023
ಸ್ಥಳ : ಮೈಸೂರು

**ಇವರಿಗೆ**

ಮುಖ್ಯೋಪಾಧ್ಯಾಯರು
ಸರ್ಕಾರಿ ಪ್ರೌಢಶಾಲೆ
ಕನಕದಾಸ ನಗರ
ಮೈಸೂರು

**ಮಾನ್ಯರೇ**

**ವಿಷಯ :–** ಅಣ್ಣನ ಮದುವೆಗೆ ಹೋಗಲು 5 ದಿನ ರಜೆ ನೀಡುವಂತೆ ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ; ದಿನಾಂಕ : 03–07–2023 ಮತ್ತು 04–02–2023 ರಂದು ಮೈಸೂರಿನಲ್ಲಿ ನಮ್ಮ ಅಣ್ಣನ ಮದುವೆಯು ನಡೆಯುತ್ತದೆ. ನಾನು ಆ ಮದುವೆಯ ಸಮಾರಂಭದಲ್ಲಿ ಭಾಗವಹಿಸಬೇಕಾಗಿದೆ. ದಿನಾಂಕ 02–02–2023 ರಿಂದ 05–02–2023 ರವರೆಗೆ ನನಗೆ ಶಾಲೆಗೆ ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನನಗೆ ಈ 5 ದಿನಗಳಿಗೆ ರಜೆಯನ್ನು ನೀಡಬೇಕೆಂದು ಈ ಮೂಲಕ ಸವಿನಯದಿಂದ ಕೇಳಿಕೊಳ್ಳುತ್ತೇನೆ.
ಈ ನನ್ನ ಕೋರಿಕೆಯು ಈಡೇರುವುದೆಂದು ನಂಬಿರುತ್ತೇನೆ.

**ವಂದನೆಗಳೊಡನೆ**

**ತಮ್ಮ ನಂಬುಗೆಯ**
**ಸಹಿ/–**
**(ಸಂಕಲ್ಪ)**

**ಹೊರ ವಿಳಾಸ**

| **ಇಂದ** | **ಇವರಿಗೆ** |
|---|---|
| ಸಂಕಲ್ಪ<br>9 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಕನಕದಾಸ ನಗರ, ಮೈಸೂರು | ಮುಖ್ಯೋಪಾಧ್ಯಾಯರು<br>ಸರ್ಕಾರಿ ಪ್ರೌಢಶಾಲೆ<br>ಕನಕದಾಸ ನಗರ<br>ಮೈಸೂರು |

**ಅಥವಾ**

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **5 ಅಂಕಗಳು** |

**ನಿಮ್ಮನ್ನು ಮೈಸೂರು ತಾಲೂಕು ಕೇರ್ಗಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ 'ಅವನಿ' ಎಂದು ಭಾವಿಸಿಕೊಂಡು, ಶಾಲಾ ಪ್ರವಾಸಕ್ಕೆ ಹೋಗಲು ಹಣ ನೀಡುವಂತೆ ಕೋರಿ, ಮಂಡ್ಯ ಜಿಲ್ಲೆಯ ಮದ್ದೂರಿನ ರಾಮಮಂದಿರದ ಬೀದಿಯಲ್ಲಿ ವಾಸವಾಗಿರುವ ಶ್ರೀಪರಮಶಿವಪ್ಪ ಎನ್ನುವ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ.**

ಕ್ಷೇಮ ಶ್ರೀ ದಿನಾಂಕ: 03–01–2022

ಅವನಿ
9 ನೆಯ ತರಗತಿ
ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ
ಕೇರ್ಗಳ್ಳಿ,
ಮೈಸೂರು ತಾಲೂಕು

ತೀರ್ಥರೂಪು ತಂದೆಯವರಿಗೆ ನಿಮ್ಮ ಪ್ರೀತಿಯ ಮಗಳು ಅವನಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ಅಲ್ಲಿ ತಾವುಗಳೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ. ಮನೆಯಲ್ಲಿ ತಾಯಿಯವರಿಗೂ ಹಾಗೂ ಅಕ್ಕನಿಗೂ ನನ್ನ ನಮಸ್ಕಾರಗಳನ್ನು ತಿಳಿಸುವುದು.

ನಾನು ಈ ಬಾರಿ ಉತ್ತಮ ಶ್ರೇಣಿಯಲ್ಲಿ ಖಂಡಿತ ತೇರ್ಗಡೆಯಾಗುತ್ತೇನೆ. ನಿಮ್ಮ ಆಸೆಯಂತೆ ಚೆನ್ನಾಗಿ ಓದಿ, ಒಳ್ಳೆಯ ಕೆಲಸಕ್ಕೆ ಸೇರಿ, ನನ್ನ ಕಾಲ ಮೇಲೆ ನಾನು ನಿಲ್ಲುತ್ತೇನೆ. ನಮ್ಮ ಶಾಲೆಯಲ್ಲಿ ಈ ಬಾರಿ ಒಂದು ದಿನದ ಪ್ರವಾಸವನ್ನು ಏರ್ಪಡಿಸಿರುತ್ತಾರೆ. ಇದಕ್ಕೆ ಎಲ್ಲರೂ ಖಡ್ಡಾಯವಾಗಿ ಬರಬೇಕೆಂದು ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ. ಪ್ರವಾಸಕ್ಕೆ ಪ್ರತಿಯೊಬ್ಬರು 400 ರೂಗಳನ್ನು ನೀಡಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ತಾವು ನನಗೆ ಪ್ರವಾಸಕ್ಕೆ ಹೋಗಿಬರಲು 500 ರೂಗಳನ್ನು ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ.
ಎಲ್ಲಾ ವಿಷಯಕ್ಕೂ ಈ ಪತ್ರ ಕಂಡ ಕೂಡಲೇ ಪತ್ರ ಬರೆಯುವುದು. ಈ ಪತ್ರದಲ್ಲಿನ ತಪ್ಪುಗಳಿಗೆ ಕ್ಷಮೆ ಇರಲಿ.

ವಂದನೆಗಳೊಡನೆ

ನಿಮ್ಮ ಪ್ರೀತಿಯ ಮಗಳು
ಸಹಿ/–
(ಅವನಿ)

**ಹೊರ ವಿಳಾಸ**

| **ಇಂದ** | **ಇವರಿಗೆ** |
|---|---|
| ಅವನಿ<br>9 ನೆಯ ತರಗತಿ<br>ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ<br>ಕೇರ್ಗಳ್ಳಿ<br>ಮೈಸೂರು ತಾಲೂಕು | ಶ್ರೀ ಪರಮಶಿವಪ್ಪ<br>ರಾಮಮಂದಿರದ ಬೀದಿ<br>ಮದ್ದೂರು<br>ಮಂಡ್ಯ ಜಿಲ್ಲೆ |

****************

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **2 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ** | **1 ಅಂಕ** |
| **ಭಾಷಾ ಶೈಲಿ, ಪದಬಂಧ** | **1 ಅಂಕ** |
| **ಒಟ್ಟು** | **5 ಅಂಕಗಳು** |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

**45.** * **ಸಾವಯವ ಕೃಷಿ**

**ಪ್ರಸ್ತಾವನೆ :–** ಇಂದು ಕೃಷಿಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ಧತಿ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಸಾಧಕ ಬಾಧಕಗಳ ಬಗ್ಗೆ ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದಾರೆ. ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವಾಗಿ ಬಂದಿರುವುದೇ ಸಾವಯವ ಕೃಷಿ ಪದ್ಧತಿ.

**ವಿಷಯ ವಿಸ್ತರಣೆ :–** ಬೆಳೆಯ ಆವರ್ತನೆ, ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಕೃಷಿ. ಹಲವು ರಾಷ್ಟ್ರಗಳಲ್ಲಿ ಸಾವಯವ ಕೃಷಿ ಪದ್ಧತಿಗಳನ್ನು ಅಂತಾರಾಷ್ಟ್ರೀಯ ನಿಯಮಗಳಿಗೆ ಒಳಪಡಿಸಲಾಗಿದೆ. ಅಂತಾರಾಷ್ಟ್ರೀಯ ಆಶ್ರಯ ಸಂಘಟನೆಯು ಸಾವಯವ ಕೃಷಿ ಸಮಷ್ಟಿಯನ್ನು 1972 ರಲ್ಲಿ ಸ್ಥಾಪಿಸಿದೆ. ಸಾವಯವ ಚಳುವಳಿ 1930 – 1940 ರ ದಶಕದಲ್ಲಿ

ಕೃಷಿಕ್ಷೇತ್ರವು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು. ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು 'ಸಾವಯವ ಕೃಷಿಯ ಪಿತಾಮಹ' ಎಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆ. ಆದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಸಾವಯವ ಕೃಷಿಯು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ತ್ವಪೂರ್ಣವಾದ ಕೊಡುಗೆ ನೀಡುತ್ತದೆ. ಹಲವು ರಾಷ್ಟಗಳಲ್ಲಿ ಸಾವಯವ ಕೃಷಿ ಪದ್ಧತಿಗಳನ್ನು ಅಂತಾರಾಷ್ಟ್ರೀಯ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನುಬದ್ಧಗೊಳಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು 'ಸಾವಯವ ಕೃಷಿ ಮಿಷನ್' ರಚಿಸಲಾಗಿದೆ.

**ಉಪಸಂಹಾರ :-** ಸಾವಯವ ಕೃಷಿಯು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಮತ್ತು ಹೆಚ್ಚು ಇಳುವರಿ ನೀಡುವ ಕೃಷಿ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ. ಆದ್ದರಿಂದ ಇದನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

*** ರಾಷ್ಟ್ರೀಯ ಭಾವೈಕ್ಯ**

**ಪೀಠಿಕೆ :** ಭಾರತವು ಒಂದು ಜಾತ್ಯತೀತ ರಾಷ್ಟ್ರ. ನಮ್ಮ ದೇಶವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿತವಾಗಿದೆ. ನಮ್ಮ ದೇಶದಲ್ಲಿ ಅನೇಕ ಧರ್ಮಗಳು, ಭಾಷೆಗಳು, ವೇಷಭೂಷಣಗಳು, ಆಹಾರ ಪದ್ಧತಿಗಳು, ಆಚರಣೆಗಳು, ಸಂಸ್ಕೃತಿಗಳು ಕಂಡುಬರುತ್ತವೆ. 'ವಿವಿಧತೆಯಲ್ಲಿ ಏಕತೆ' ಎಂಬುದು ನಮ್ಮ ದೇಶದ ಪರಂಪರೆಯಾಗಿದೆ.

**ವಿಷಯ ನಿರೂಪಣೆ :** ಈ ರೀತಿಯ ಬಹುಮುಖಿ ಸಂಸ್ಕೃತಿಯನ್ನುಳ್ಳ ನಮ್ಮ ದೇಶದಲ್ಲಿ ಏಕತೆಯನ್ನು ಮೂಡಿಸುವುದು ಸವಾಲಿನ ಕಾರ್ಯವಾಗಿದೆ. ಆದರೆ ನಮ್ಮ ಸಂಸ್ಕೃತಿಯ ಪರಮತ ಸಹಿಷ್ಣುತೆಯನ್ನು ವೇದಕಾಲದಿಂದಲೂ ಬೋಧಿಸಿಕೊಂಡು ಬಂದಿರುವುದರಿಂದ ಸಹಬಾಳ್ವೆ ಮಾಡುವುದು ಇಂದು ಎಲ್ಲರಿಗೂ ಸಾಧ್ಯವಾಗಿದೆ. 'ವಸುಧೈವ ಕುಟುಂಬಕಂ'. 'ಸರ್ವೇಜನಾಃ ಸುಖಿನೋ ಭವಂತು' ಎಂಬುದು ನಮ್ಮ ನಾಡಿನ ಧ್ಯೇಯವಾಗಿದೆ. ಆದರೂ ಅಲ್ಲಲ್ಲಿ ಭಿನ್ನತೆ ಮಾತುಗಳು ಆಗಾಗ್ಗೆ ಕೇಳಿಬಂದು, ದೇಶದ ಶಾಂತಿಯನ್ನು ಕದಡುವ ಕಾರ್ಯವನ್ನು ಮಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಧರ್ಮ ಧರ್ಮಗಳ ನಡುವೆ ಭೇದಭಾವನೆಯನ್ನು ತೋರುವುದು. ಜಾತಿಯ ಹೆಸರಿನಲ್ಲಿ ಮೇಲುಕೀಳು ಭಾವನೆಯನ್ನು ಮೂಡಿಸುವುದು, ಭಾಷೆಯಿಂದ ಜನರನ್ನು ವರ್ಗೀಕರಿಸುವುದು. ಮೊದಲಾದ ದುಷ್ಕೃತ್ಯಗಳನ್ನು ಕಾಣಬಹುದು. ಇದರಿಂದ ಅಸಹಿಷ್ಣುತೆ ಮನೋಭಾವ ಜನರಲ್ಲಿ ಮೂಡುತ್ತದೆ. ಆದರೆ ನಾವು ಇವುಗಳನ್ನು ಹೋಗಲಾಡಿಸಲು ಕಂಕಣಬದ್ಧರಾಗಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಗಳ ಮೂಲಕ ಜನರನ್ನು ಜಾಗೃತಗೊಳಿಸಬೇಕು. ರಾಷ್ಟ್ರ, ರಾಷ್ಟ್ರಧ್ವಜ, ರಾಷ್ಟ್ರಗೀತೆಯ ಬಗ್ಗೆ ಅಭಿಮಾನ ಮೂಡಿಸಬೇಕು. ಎಲ್ಲ ಧರ್ಮಗಳ ಸಾರವು ಒಂದೇ ಎಂಬುದನ್ನು ಅರಿತರೆ ಧಾರ್ಮಿಕ ಅಸಹಿಷ್ಣುತೆಗೆ ಅವಕಾಶ ಇರುವುದಿಲ್ಲ. ನಾವೆಲ್ಲರೂ ಭಾರತಮಾತೆಯ ಮಕ್ಕಳು ಎಂಬ ಭಾವ ಮೂಡಿದಾಗ ಜಾತಿ, ಮತ, ಭಾಷೆಗಳ ಭೇದಭಾವಕ್ಕೆ ಅವಕಾಶ ಇರುವುದಿಲ್ಲ. ದೇಶಪ್ರೇಮವನ್ನು ಮನಮನದಲ್ಲೂ ಮೂಡಿಸಿಕೊಳ್ಳಬೇಕು. ರಾಷ್ಟ್ರೀಯ ಭಾವೈಕ್ಯಕ್ಕೆ ಭಂಗ ತರುವಂತಹ ದುಷ್ಟಶಕ್ತಿಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನುರೀತ್ಯ ಕ್ರಮಕೈಗೊಂಡು, ಉಗ್ರವಾದ ಶಿಕ್ಷೆಯನ್ನು ನೀಡಬೇಕು. ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವತ್ತ ನಮ್ಮ ನಡೆಯಿರಬೇಕು.

**ಉಪಸಂಹಾರ :** ಶಾಲಾಕಾಲೇಜುಗಳಲ್ಲಿ ರಾಷ್ಟ್ರೀಯ ಭಾವೈಕ್ಯವನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ನಡೆಯಿಸುವುದರ ಮೂಲಕ ಬಾಲಕರಲ್ಲಿ, ಯುವಕರಲ್ಲಿ ದೇಶಾಭಿಮಾನ ಮೂಡಿಸುವ ಕಾರ್ಯವನ್ನು ಮಾಡಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಯನ್ನು ವೈಭವದಿಂದ ನಡೆಸಬೇಕು. 'ನಾವೆಲ್ಲರೂ ಭಾರತೀಯರು; ನಾವೆಲ್ಲರೂ ಒಂದೇ' ಎಂಬ ಮನೋಭಾವದಿಂದ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವುದು ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

---- 0 ----